ಬಾದಾಮಿ ತಾಲ್ಲೂಕಿನಲ್ಲಿ ಬ್ಯಾರೇಜುಗಳ ನಿರ್ಮಾಣ.

1111. ಶ್ರೀ ಎಂ. ಕೆ. ಪಟ್ಟಣಶೆಟ್ಟಿ (ಬಾದಾಮಿ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬಾದಾಮಿ ತಾಲ್ಲೂಕಿನಲ್ಲಿ ಎಷ್ಟು ಬ್ಯಾರೇಜುಗಳ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಗಿದೆ ;

ಆ) ಆ ಬ್ಯಾರೇಜುಗಳ ನಿರ್ಮಾಣದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) 1991–92ನೇ ಸಾಲಿನ ಸಣ್ಣನೀರಾವರಿಯ ಹಾಗೂ ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ಬಾದಾಮಿ ತಾಲ್ಲೂಕು ಅಸಂಗಿ ಬ್ಯಾರೇಜ್ ಮತ್ತು ಪಟ್ಟದಕಲ್ಲು ಬ್ಯಾರೇಜ್ ನಿರ್ಮಾಣದ ಕಾಮಗಾರಿಗಳು ಸೇರಿವೆ. ಅಸಂಗಿ ಬ್ಯಾರೇಜಿನ ಹೈಡ್ರಾಲಜಿ ಮತ್ತು ವಿನ್ಯಾಸಗಳಿಗೆ ಒಪ್ಪಿಗೆ ನೀಡಲಾಗಿದ್ದು ಅಂದಾಜು ಪತ್ರಿಕೆ ತಯಾರಿಸಬೇಕಾಗಿದೆ. ಪಟ್ಟದಕಲ್ಲು ಬ್ಯಾರೇಜಿನ ಅಂದಾಜಿನ ಕೆಲವು ನ್ಯೂನತೆಗಳನ್ನು ಸರಿಪಡಿಸಲು ಜಿಲ್ಲಾ ಪರಿಷತ್ ಇಂಜಿನಿಯರ್ ವಿಭಾಗಕ್ಕೆ ಹಿಂದಿರುಗಿಸಲಾಗಿದೆ. ಇವುಗಳಿಗೆ ಇನ್ನೂ ಆಡಳಿತಾತ್ಮಕ ಒಪ್ಪಿಗೆ ನೀಡಿಲ್ಲ.

ಆ) ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ ನಂತರ ಕೆಲಸ ಪ್ರಾರಂಭಿಸಲಾಗುವುದು.

ವಯಸ್ಸಾದ ಕಲಾವಿದರಿಗೆ ಮಾಸಾಶನದ ಮಂಜೂರು

1032. ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) :– ಮಾನ್ಯ ಯುವಜನಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಈ ವರ್ಷವಾದರೂ ವಯಸ್ಸಾದ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲು ಸರ್ಕಾರ ಯೋಚಿಸಿದೆಯೇ ;

ಆ) ಹಾಗಿದ್ದಲ್ಲಿ ಈ ವರ್ಷದ ಆಯವ್ಯಯದಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ ;

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)–

ಅ) ಕಲಾವಿದರಿಗೆ ಮಾಸಾಶನ ಕೊಡಲಾಗುತ್ತಿದೆ.

ಆ) ರೂ. 50,00,000–00 ಗಳನ್ನು ಒದಗಿಸಲಾಗಿದೆ.

ಅಥರ್ಗ ನಾಲಾ ಕೆಳಗೆ ಬ್ಯಾರೇಜು ಕೆಲಸಗಳನ್ನು ಇಲಾಖೆಯಿಂದ ನಿರ್ವಹಣೆ.

1033. ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಅಥರ್ಗಾ ನಾಲಾ, ಹತ್ತಳ್ಳಿ ನಾಲಾ ಮತ್ತು ಶಿರಾಡೋಣ ನಾಲಾಗಳ ಮೇಲೆ ಬ್ಯಾರೇಜು ಕೆಲಸಗಳನ್ನು ಇಲಾಖೆಯು ಕೈಗೊಳ್ಳುವುದೇ ;

ಆ) ಹಾಗಿದ್ದಲ್ಲಿ, ಈ ಕೆಲಸಗಳು ಎಂದು ಮಂಜೂರಾಗುವುವು ಮತ್ತು ಎಷ್ಟು ಹಣವನ್ನು ಈ ಯೋಜನೆಗಳಿಗೆ ಸರ್ಕಾರವು ಕಾದಿರಿಸುವುದು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು) –

ಅ) ಮತ್ತು ಆ) ಈ ಯೋಜನೆಗಳ ಬಗ್ಗೆ ವಿವರವಾದ ಸಮೀಕ್ಷೆ ನಡೆಸಿ ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಶಕ್ಯವಿದ್ದಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.